ಶೀಲನೆಯಲ್ಲಿದ್ದು ಈಗಾಗಲೇ ತತ್ವಶಃ ಒಪ್ಪಿಗೆ ನೀಡಿದೆ. ಬಹುಶಃ ಎ.ಪಿ.ಎಂ.ಸಿ.ಯಾರ್ಡ್‌ನಲ್ಲಿ ನೀವು ಜಾಗ ಕೊಡುವುದಾದರೆ, ಖಂಡಿತ ಈ ಶೈತ್ಯಾಗಾರವನ್ನು ನಾವು ಮಾಡಿಕೊಡುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ:- ಇದು 10 ವರ್ಷಗಳ ಹಿಂದೆನೇ ಆಗಬೇಕಾಗಿತ್ತು ಇಂದಾದರೂ ಸಹಿತ ಉತ್ತರ ಕೊಟ್ಟಿದ್ದಾರೆ. ಜಾಗ ಎ.ಪಿ.ಎಂ.ಸಿ.ಯಲ್ಲಿದೆ, ತಾವು ಎಂದು ಪ್ರಾರಂಭ ಮಾಡುತ್ತೀರಿ! ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಎಂದಿನಿಂದ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಡಿ.ಟಿ. ಜಯಕುಮಾರ್:- ನಮಗೆ ಹಣದ ಕೊರತೆಯೇನೂ ಇಲ್ಲ. ತಾವು ಜಾಗ ಕೊಟ್ಟ ತಕ್ಷಣವೇ ಕೆಲಸ ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು:- ಈ ಅಧಿವೇಶನವಾದ ಕೂಡಲೇ ಒಂದು ಸಾರಿ ಹೋಗಿ, ಅವರು ಜಾಗ ತೋರಿಸುತ್ತಾರೆ. ಹಣ ರೆಡಿ ಇದೆಯೆಂದು ಹೇಳುತ್ತೀರಿ, ಕೆಲಸ ಶುರು ಮಾಡಿಸಿ.

ಶ್ರೀ ಡಿ.ಟಿ. ಜಯಕುಮಾರ್:- ಆಗಬಹುದು.

ವಿಷಯ:- ಮಾಲೂರು ನಗರದಲ್ಲಿ ಕೊಳಚೆ ನಿರ್ಮೂಲನ ಮಂಡಲಿಯಿಂದ ಮನೆಗಳ ನಿರ್ಮಾಣ

287 (1949) **ಶ್ರೀ ಹೆಚ್.ಟಿ. ದ್ಯಾವರಪ್ಪ (ಮಾಲೂರು):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಲೂರು ನಗರದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯಿಂದ ಮನೆಗಳನ್ನು ನಿರ್ಮಿಸಲು ಯಾವಾಗ ಪ್ರಾರಂಭಿಸಲಾಯಿತು?

ಆ) ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಇ) ಮಂಜೂರಾದ ಮನೆಗಳ ನಿರ್ಮಾಣದ ಕೆಲಸ ತಡವಾಗಲು ಕಾರಣವೇನು? ಎಷ್ಟು ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) 1990-91ರಲ್ಲಿ 36 ಮನೆಗಳನ್ನು ಮತ್ತು 1995-96ರಲ್ಲಿ 56 ಮನೆಗಳನ್ನು ಪ್ರಾರಂಭಿಸಲಾಯಿತು.

ಆ) 92 ಮನೆಗಳು.

ಇ) ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ದಿನಾಂಕ: 29.3.90ರಲ್ಲಿ ಶ್ರೀ ಎಂ.ವಿ. ಜಗದೀಶ್ ಗುತ್ತಿಗೆದಾರರಿಗೆ ನೀಡಲಾಯಿತು. ತಳಪಾಯದ ಕೆಲಸವು ಪ್ರಗತಿಯಲ್ಲಿರುವಾಗ ಜುಲೈ 1990ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿಯ ಮಾರ್ಜಿನ್ ಬಿಡುವ ವಿಚಾರದಲ್ಲಿ ಅಡಚಣೆ ಬಂದ ಕಾರಣ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬ ಉಂಟಾಯಿತು. ಇದರ

ಜೊತೆಗೆ ಗುತ್ತಿಗೆದಾರರು ಅರ್ಧದಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದುದರಿಂದ ಅವರ ಗುತ್ತಿಗೆಯನ್ನು ರದ್ದು ಪಡಿಸಿ ಬೇರೊಬ್ಬರಿಗೆ ವಹಿಸುವಲ್ಲಿ ಕಾನೂನಿನಂತೆ ಕ್ರಮ ಕೈಗೊಳ್ಳಬೇಕಾದ ಅಂಶವೂ ಕೂಡ ವಿಳಂಬಕ್ಕೆ ಮತ್ತೊಂದು ಕಾರಣವಾಗಿರುತ್ತದೆ. ಈಗಾಗಲೇ 36 ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ನೀಡಲಾಗಿದೆ. ಇನ್ನುಳಿದ 56 ಮನೆಗಳನ್ನು ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಬಿ. ದ್ಯಾವರಪ್ಪ:- ಸ್ವಾಮಿ, ಈ ಮನೆಗಳು ಪ್ರಾರಂಭವಾಗಿದ್ದು, ಸುಮಾರು 1990 ರಲ್ಲಿ, ಅವರ ಉತ್ತರದಲ್ಲಿ ಹೇಳುವ ಪ್ರಕಾರ – 36 ಮನೆಗಳನ್ನು ಕಟ್ಟಿದ್ದಾರೆ; ಬಹಳ ವಂದನೆಗಳು. ಆದರೆ, ಕಟ್ಟಬೇಕಾದಂಥ 56 ಮನೆಗಳು 8 ವರ್ಷಗಳಿಂದ ಕಟ್ಟುವುದಕ್ಕಾಗಿಲ್ಲವಲ್ಲ! ಏನೋ ಬಡವರು ಬಾಯಿ ಬಾಯಿ ಬಿಟ್ಟುಕೊಂಡು ಸರ್ಕಾರದವರು ಮನೆ ಕಟ್ಟುತ್ತಾರೆ ಎಂದು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದರೆ, ನೀವು ಆ ಮನೆಗಳನ್ನು ಕಟ್ಟದೇ ಇರುವುದರಿಂದ ಅವರು ಅದೇ ಗುಡಿಸಲುಗಳಲ್ಲಿಯೇ ಶಾಶ್ವತವಾಗಿ ಉಳಿದುಕೊಂಡಿದ್ದಾರೆ. ಈಗ ಬಾಕಿ 56 ಮನೆಗಳು ಪ್ರಾರಂಭವಾಗಿದೇ ಎಂದು ಅವರ ಉತ್ತರದಲ್ಲಿ ಹೇಳುತ್ತಾರೆ, ಪ್ರಾರಂಭವಾಗಿದೆ ಒಪ್ಪಿಕೊಳ್ಳೋಣ. ಆದರೆ, ಅವುಗಳನ್ನು ಯಾವಾಗ ಕಟ್ಟುತ್ತಾರೆ? ಏಕೆ ನಿಧಾನವಾಯಿತು? 6-7 ವರ್ಷಗಳಿಂದ 90 ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿಲ್ಲವೇ? ಸರ್ಕಾರದಲ್ಲಿ ಹಣ ಇಲ್ಲವೇ? ಅಥವಾ ಕೆಲಸ ಮಾಡತಕ್ಕ ಅಧಿಕಾರಿಗಳು ಇಲ್ಲವೇ ಎಂದು ಕೇಳಿದರೆ, ಯಾರಿಗೋ ಕಂಟ್ರಾಕ್ಟ್ ಕೊಟ್ಟರಂತೆ, ಕಂಟ್ರಾಕ್ಟದಾರರು ಈಗ ಬಿಟ್ಟುಬಿಟ್ಟಿದ್ದಾರಂತೆ. ಬೇರೆಯವರಿಗೆ ಈಗ ವ್ಯವಸ್ಥೆ ಮಾಡಿದ್ದಾರಂತೆ. ಆದ್ದರಿಂದ ತೊಂದರೆಯಾಯಿತು ಎಂದು ಹೇಳುತ್ತಾರೆ. ಈ ರೀತಿ ಆಗುತ್ತಾ ಹೋದರೆ, ಆ ಬಾಯಿ ಬಿಟ್ಟುಕೊಂಡಿರತಕ್ಕ ಬಡವರ ಗತಿ ಏನೆಂದು ಕೇಳುತ್ತಾ, ಆ ಮನೆಗಳನ್ನು ಆದಷ್ಟು ಬೇಗ ಕಟ್ಟಿಕೊಡಬೇಕೆಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತೆ, ಮಾಲೂರು ತಾಲ್ಲೂಕಿನಲ್ಲಿ 1990ನೇ ಇಸವಿಯಲ್ಲಿ ಒಂದನೇ ಹಂತದಲ್ಲಿ 32 ಮನೆಗಳು, 2ನೇ ಹಂತದಲ್ಲಿ ಸುಮಾರು 60 ಮನೆಗಳನ್ನು ಹೀಗೆ ಒಟ್ಟು 92 ಮನೆಗಳನ್ನು ನಾವು ತೆಗೆದುಕೊಂಡಿದ್ದೆವು. ಈ ಕೆಲಸವನ್ನು ಗುತ್ತಿಗೆದಾರರಿಗೆ ಕೊಟ್ಟಿದ್ದೆವು, ಆ ಗುತ್ತಿಗೆದಾರರು ಮಾಡದೇ ಇದ್ದುದರಿಂದ, ಈಗ ಬೇರೆ ಗುತ್ತಿಗೆ ದಾರರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಆದಷ್ಟು ಬೇಗ ಮಾಡಿಸಿಕೊಡುತ್ತೇವೆಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಹೆಚ್.ಬಿ. ದ್ಯಾವರಪ್ಪ:- ಆ ಮನೆಗಳನ್ನು ಕಟ್ಟುವ ಕಡೆ ಇನ್ನೂ ಸ್ವಲ್ಪ ಜಾಗ ಇದೆ. ಅಲ್ಲೂ ಮನೆಗಳನ್ನು ಕಟ್ಟುತ್ತಾರೆ, ನಮಗೂ ಕೊಡುತ್ತಾರೆಂದು ಅನೇಕ ಜನರು ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು. ಸೇರಿಕೊಂಡುಬಿಟ್ಟಿದ್ದಾರೆ. ಅವರಿಗೂ ಮನೆ ಬೇಕೆಂದು ಕೇಳುತ್ತಿದ್ದಾರೆ. ನೀವು 96 ಮನೆಗಳನ್ನು ಕಟ್ಟಿದರೂ ಸಹ ಅವರು ಆ ಜಾಗ ಬಿಡುವ ಹಾಗೆ ಇಲ್ಲ. ಅವರಿಗೂ ಸಹ ನೀವು ಮನೆ ಕಟ್ಟತಕ್ಕ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಅವರ ಕ್ಷೇತ್ರಕ್ಕೆ ಕೊಡುವ ಹಣದಲ್ಲಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಕುರಿತು

288 (2041) **ಶ್ರೀ ಡಿ.ಆರ್. ಪಾಟೀಲ್ (ಗದಗ್):-** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ?

ಆ) ಜಾರಿಗೆ ಬಂದ ವರ್ಷದಿಂದ ಈವರೆಗೆ ವಿತರಣೆ ಮಾಡಿರುವ ಬೆಳೆ ವಿಮಾ ಪರಿಹಾರವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಬೆಳೆ ವಿಮೆ ಯೋಜನೆಗೆ ತಾಲ್ಲೂಕನ್ನು ಘಟಕವನ್ನಾಗಿ ಮಾಡುವುದರ ಬದಲು ಪಂಚಾಯಿತ್ ಪ್ರದೇಶವನ್ನು ಘಟಕವನ್ನಾಗಿ ಮಾಡುವ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ಬೆಳೆ ವಿಮಾ ಯೋಜನೆಯು 1985ನೇ ಸಾಲಿನ ಮುಂಗಾರು ಹಂಗಾಮಿನಿಂದ ಜಾರಿಯಲ್ಲಿದೆ.

ಆ)

ವರ್ಷ	ವಿತರಿಸಲಾಗಿರುವ ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ)
1985-86	372.90
1986-87	327.32
1987-88	715.08
1988-89	ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿರುವುದಿಲ್ಲ.
1989-90	77.05
1990-91	31.74
1991-92	52.95
1992-93	534.21
1993-94	282.58
1994-95	108.88

ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪಂಚಾಯಿತಿ ಪ್ರದೇಶವನ್ನು ಘಟಕವನ್ನಾಗಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿಲ್ಲ. ಹಾಲಿ, ತಾಲ್ಲೂಕನ್ನು ಘಟಕವನ್ನಾಗಿ ಪರಿಗಣಿಸಲಾಗುತ್ತಿದ್ದು ಹೋಬಳಿಯನ್ನು ಘಟಕವನ್ನಾಗಿ ಪರಿಗಣಿಸುವ ಪ್ರಯತ್ನಗಳು ನಡೆದಿವೆ.